<u>Government of Karnataka</u>

<u>Deposition Sheet Form No. R.P. 57</u>

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ/ ಸಿ ನಂಬರಃ 294/2020

ಸಿ ಡಬ್ಲ್ಯೂ- 16
ಪಿ ಡಬ್ಲ್ಯೂ- 13

ಸಾಕ್ಷಿದಾರರ ಹೆಸರು ಃ- ಯಶವಂತ

ತಂದೆಯ ಹೆಸರು ಃ- ಹನುಮಂತ ಬಿಸನಳ್ಳಿ

ವಯಸ್ಸು ಃ- 46 ವರ್ಷ

ಉದ್ಯೋಗ ಃ- ಪಿ.ಐ ಮುಂಡರಗಿ ಪೋಲಿಸ್ ಠಾಣೆ

ಸ್ಥಳ ಃ- ಮುಂಡರಗಿ

ದಿ.26-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನಾನು ದಿನಾಂಕ 22-02-2019 ರಿಂದ 22-09-2021 ರ ವರೆಗೆ ನಾನು ಲಿಂಗಸಗೂರು ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 26-08-2019 ರಂದು ಈ ಪ್ರಕರಣದ ಕಡತವನ್ನು ಚಾಸಾ-15 ರವರಿಂದ ಪಡೆದು ಸ್ವೀಕರಿಸಿರುತ್ತೇನೆ. ಈಗ ಚಾ.ಸಾ-15 ರವರು ಸುಮಾರು 8-10 ತಿಂಗಳ ಮೃತ ಪಟ್ಟಿರುತ್ತಾರೆ. ಸಾಕ್ಷಿಯು ನಿ.ಪಿ-3 ರಲ್ಲಿರುವ ಚಾ.ಸಾ-15 ರವರ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯಲ್ಲಿ ಚಾ.ಸಾ-15 ರವರ ಸಹಿ ನೋಡಿ ಗುರುತಿಸಿದ್ದರಿಂದ ಪ್ರಥಮ ವರ್ತಮಾನ ವರದಿಯನ್ನು ನಿ.ಪಿ-11 ಎಂದು, ಚಾ.ಸಾ-15 ರವರ ಸಹಿಯನ್ನು ನಿ.ಪಿ-11(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ನಾನು ಚಾ.ಸಾ-2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳಕ್ಕೆ ಬೇಟಿ ನೀಡಿ ಪಂಚನಾಮೆಯನ್ನು ಬೆಳಿಗ್ಗೆ 10-00 ರಿಂದ 10-45 ವರೆಗೆ ಮಾಡಿ ಪೋಟೋ ತೆಗೆಯಿಸಿ ಹಿಡಿಗಾತ್ರದ ಕಲ್ಲನ್ನು ಮತ್ತು ಗಾಜಿನ ಚೂರುಗಳನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1(ಸಿ) ಎಂದು ಗುರುತಿಸಲಾಯಿತು. ಪೋಟೋಗಳನ್ನು ಈಗಾಗಲೆ ನಿ.ಪಿ-4 ಮತ್ತು 5 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿ.ಪಿ-5(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ನಾನು ಚಾ.ಸಾ-2 ಮತ್ತು 3 ರವರ

ಸಮಕ್ಷಮ ಪೋಲಿಸ್ ಠಾಣಾ ಆವರಣದಲ್ಲಿ ಜಖಂಗೊಂಡ ವಾಹನದ ಪಂಚನಾಮೆಯನ್ನು ಬೆಳಿಗ್ಗೆ 11-00 ರಿಂದ 11-45 ವರೆಗೆ ಮಾಡಿ ಪೋಟೋ ತೆಗೆಯಿಸಿ ಗಾಜಿನ ಚೂರುಗಳನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಸಿ) ಎಂದು ಗುರುತಿಸಲಾಯಿತು. ಪೋಟೋಗಳನ್ನು ಈಗಾಗಲೆ ನಿ.ಪಿ-6 ಮತ್ತು 7 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿ.ಪಿ-7(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾ.ಸಾ-6 ರಿಂದ 8 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 27-08-2019 ರಂದು ಚಾ.ಸಾ-1 ರವರ ಪುರವಣಿ ಹೇಳಿಕೆ ಮತ್ತು ಚಾ.ಸಾ-10 ಮತ್ತು 11 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕ 31-08-2019 ರಂದು ಚಾ.ಸಾ-4 ರಿಂದ 11 ರವರ ಪುರವಣಿ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ 1 ರಿಂದ 4 ನೇ ಆರೋಪಿತರನ್ನು ಪಿ.ಎಸ್.ಐ ರವರು ರಾತ್ರಿ 8-00 ಗಂಟೆಗೆ ನನ್ನ ಮುಂದೆ ಹಾಜರು ಪಡಿಸಿದ್ದು ಅವರನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದಿನಾಂಕ 05-09-2019 ರಂದು ಚಾ.ಸಾ-1, 4 ರಿಂದ 11 ರವರ ಪುರವಣಿ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 30-09-2019 ರಂದು ಸರ್ಕಾರಿ ಆಸ್ಪತ್ರೆ ಲಿಂಗಸುಗೂರನಿಂದ ಚಾ.ಸಾ-4 ರಿಂದ 6 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದಿರುತ್ತೇನೆ. ದಿನಾಂಕ 02-10-2019 ರಂದು ಚಾ.ಸಾ-14 ರವರಿಂದ ಜಖಂಗೊಂಡ ವಾಹನದ ಆರ್.ಪಿ.ಐ ರಾಯಚೂರು ರವರಿಂದ ವಾಹನ ಹಂಚಿಕೆ ಕೆಎ-36, ಜಿ-128 ರ ದೃಡಿಕರಣ ಆದೇಶದ ಪ್ರತಿಯನ್ನು ಪಡೆದಿರುತ್ತೇನೆ.

2. ದಿನಾಂಕ 15-12-2019 ರಂದು 5 ರಿಂದ 8 ನೇ ಆರೋಫಿತರಿಗೆ ಕಲಂ.41(ಎ) ಅಡಿಯಲ್ಲಿ ನೋಟಿಸು ಜಾರಿ ಮಾಡಿರುತ್ತೇನೆ. ದಿನಾಂಕ 04-01-2020 ರಂದು ವಾಹನ ಜಖಂಗೊಂಡ ಬಗ್ಗೆ ಆರ್.ಟಿ.ಓ ರವರಿಂದ ವರದಿ ಪಡೆದಿರುತ್ತೇನೆ. ದಿನಾಂಕ 10-01-2020 ರಂದು ಆರೋಪಿತರ ವಿರುದ್ದ ಆರೋಪ ಸಾಬೀತಾಗಿದ್ದರಿಂದ ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ದ ಅಂತಿಮ ವರದಿ ಸಲ್ಲಿಸಿರುತ್ತೇನೆ. ದಿನಾಂಕ 05-09-2019 ರಂದು ಮೊಬೈಲ್ ದೃಶ್ಯಾವಳಿಯನ್ನು ನೋಡಿ 5 ರಿಂದ 8 ನೇ ಆರೋಪಿತರನ್ನು ನೋಡಿ ಗುರುತಿಸಿದ ಬಗ್ಗೆ ಛಾಯಾಚಿತ್ರದಲ್ಲಿ ನೋಡಿ ಗುರುತಿಸಿರುತ್ತಾರೆ. ಸದರಿ ಛಾಯಾ ಚಿತ್ರವನ್ನು ನಿ.ಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-12(ಎ) ಎಂದು ಗುರುತಿಸಲಾಯಿತು. ಗಾಯದ ಪ್ರಮಾಣ ಪತ್ರಗಳನ್ನು ಈಗಾಗಳನ್ನು ಈಗಾಗಲೇ ನಿ.ಪಿ-8 ರಿಂದ 10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿ.ಪಿ-8(ಬಿ) ರಿಂದ ನಿ.ಪಿ-10(ಬಿ) ಎಂದು ಗುರುತಿಸಲಾಯಿತು. ವಾಹನ ಹಂಚಿಕೆಯಾದ ಆದೇಶದ ಪ್ರತಿಯನ್ನು ನಿ.ಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-13(ಎ) ಎಂದು

ಗುರುತಿಸಲಾಯಿತು. ಆರ್.ಟಿ.ಓ ವರದಿಯನ್ನು ನಿ.ಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-14(ಎ) ಎಂದು ಗುರುತಿಸಲಾಯಿತು. ಕಲ್ಲು ಮತ್ತು ಗಾಜಿನ ಚೂರುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೇಮಾಲು-1 ಮತ್ತು 2 ಎಂದು ಗುರುತಿಸಲಾಗಿದೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

***ಪಾಟೀ ಸವಾಲು: ಶ್ರೀ. ಎಸ್.ಎಮ್.ಪಿ ವಕೀಲರಿಂದ :-***

ಆರೋಪಿಯನ್ನು ಬೆಂಗಾವಲಿನಲ್ಲಿ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗುವಾಗ ಜಪಿಗೆ ಅಡ್ಡಗಟ್ಟಿ ನಿಲ್ಲಿಸಿ ಜಖಂಗೊಳಿಸಿದ ಘಟನೆಯ ಬಗ್ಗೆ ತನಿಖೆ ಮಾಡಿರುತ್ತೇನೆ. ಆ ದಿನ ಈ ಘಟನೆಗೆ ಸಂಬಂಧಿಸಿದಂತೆ ಲಿಂಗಸುಗೂರು ಪಟ್ಟಣದಲ್ಲಿ ಸುಮಾರು 10 ಕ್ಕಿಂತ ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂದರೆ ಸರಿಯಲ್ಲ. ಸಿ.ಸಿ.ನಂ.478/2020, 73/2020, 26/2023 ಗಳಲ್ಲಿ ಆರೋಪಿತರು ದೋಷಮುಕ್ತರಾಗಿ ಬಿಡುಗಡೆಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ಸುಮಾರು 500-600 ಜನ ಸೇರಿದ್ದರು ಎಂದರೆ ಸರಿ. ಘಟನಾ ಸ್ಥಳ ಸಾರ್ವಜನಿಕ ಸ್ಥಳ ಎಂದರೆ ಸರಿ. ದೂರಿನಲ್ಲಿ ಸುಮಾರು 20-25 ಜನ ಅಡ್ಡಗಟ್ಟಿ ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದಿದ್ದು ಕರ್ತವ್ಯಕ್ಕೆ ಅಡ್ಡಪಡಿಸಿದ್ದರು ಎಂದು ಹೇಳಿದ್ದರು ಆ 20-25 ಜನ ಯಾರು ಎಂದು ನನ್ನ ತನಿಖೆಯಲ್ಲಿ ಕಂಡು ಬಂದಿಲ್ಲ. ಕೇವಲ 1 ರಿಂದ 8 ನೇ ಆರೋಪಿತರ ವಿರುದ್ದ ಆರೋಪ ಕಂಡು ಬಂದಿರುತ್ತದೆ. ಸುಮಾರು 50-60 ಜನರ ಬಗ್ಗೆ ನಾನು ತನಿಖೆ ಮಾಡಿರುತ್ತೇನೆ ಆದರೆ ಅವರು ಪತ್ತೆಯಾಗಿರುವುದಿಲ್ಲ. ಆರೋಪಿತರಲ್ಲಿ ಯಾರು ನಿಖರವಾಗಿ ಈ ಕೃತ್ಯ ಮಾಡಿದ್ದಾರೆ ಎಂದು ಹೇಳಲಾಗುವದಿಲ್ಲ. ನಮ್ಮ ಕರ್ತವ್ಯಕ್ಕೆ ಆರೋಪಿತರಲ್ಲಿ ಯಾರು ಅಡ್ಡಿ ಪಡಿಸಿರತ್ತಾರೆ ಎಂದು ನಿಖರವಾಗಿ ಹೇಳಲಾಗುವದಿಲ್ಲ. ಸುಮಾರು 20-25 ಹಾಗೂ 50-60 ಜನರ ಬಗ್ಗೆ ನನ್ನ ಅಂತಿಮ ವರದಿಯಲ್ಲಿ ವಿವರಣೆ ನೀಡಿರುವುದಿಲ್ಲ. ಚಾ.ಸಾ-6 ರಿಂದ 8 ರವರಿಗೆ ಯಾವ ಆರೋಪಿತರು ನಿಖರವಾಗಿ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ನಿಖರವಾಗಿ ಹೇಳಲಾಗುವದಿಲ್ಲ. ಘಟನಾ ಸ್ಥಳದಲ್ಲಿ ಇವರೇ ಆರೋಪಿತರು ಎಂದು ಬಾತ್ಮಿದಾರರು ಎಂದು ತಿಳಿದು ಬಂದಿರುತ್ತದೆ. ಅಂತಿಮ ವರದಿಯಲ್ಲಿ ಯಾವ ಆರೋಪಿತರು ಕಲ್ಲು, ಕಟ್ಟಿಗೆ ಹಿಡಿದು ಹಲ್ಲೆ ಮಾಡಿದ ಬಗ್ಗೆ ವಿವರಣೆ ನೀಡಿಲ್ಲ ಹಾಗೂ ಯಾವ ಆರೋಪಿತರು ಕರ್ತವ್ಯಕ್ಕೆ ಅಡ್ಡಪಡಿಸಿರುತ್ತಾರೆ ಎಂದು ಸ್ಪಷ್ಟನೆ ನೀಡಿಲ್ಲ ಎಂದರೆ ಸರಿ.

2. ಯಾವ ಆರೋಪಿತರು ಏನು ಉದ್ಯೋಗ ಮಾಡುತ್ತಿದ್ದಾರೆ ಎಂದು ಅಂತಿಮ ವರದಿಯಲ್ಲಿ ನಮೂದಿಸಿರುತ್ತೇನೆ. ಆರೋಪಿತರಲ್ಲಿ ಮೀನು ಮಾರಾಟಗಾರರು, ತಕರಾರಿ ಮತ್ತು ಹಣ್ಣು

ಮಾರಾಟಗಾರರಿದ್ದು ಮತ್ತು ಆಟೋ ಚಾಲಕರಿದ್ದಾರೆ ಎಂದರೆ ಸರಿ. ಅವರು ಪ್ರತಿದಿನ ಆ ಘಟನಾ ಸ್ಥಳದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಾವು ನಿಜವಾದ ಆರೋಪಿತರನ್ನು ಪತ್ತೆ ಮಾಡದೆ ಸ್ಥಳದಲ್ಲಿ ಕೆಲಸ ಮಾಡುವ ಅಮಾಯಕರ ವಿರುದ್ದ ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***<u>ಪಾಟೀ ಸವಾಲು: ಶ್ರೀ. ಎಸ್.ಹೆಚ್.ಜಿ ಮತ್ತು ಎಮ್.ಎಸ್.ಪಿ ವಕೀಲರಿಂದ :-</u>***

ಮೇಲಿನ ಪಾಟೀ ಸವಾಲನ್ನುಅಳವಡಿಸಿಕೊಳ್ಳು ಕೋರಿದ್ದು ಅನುಮತಿಸಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)*

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.